ತುಂಬಲು ಕೆಲವು ವಿಷಯ ವಿಭಾಗಗಳಲ್ಲಿ ಮುಂಬಡ್ತಿ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ. ಕೆಲವು ವಿಷಯಗಳ ವಿಭಾಗಗಳಲ್ಲಿ (ಕ್ಷಯರೋಗ, ಹೃದ್ರೋಗ ಮತ್ತು ಔಷಧ ಶಾಸ್ತ್ರ ವಿಭಾಗಗಳಲ್ಲಿ) ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ ಪ್ರಾಧ್ಯಾಪಕರುಗಳು ಹುದ್ದೆಗಳನ್ನು ತುಂಬಲು ಸಾಧ್ಯವಾಗುತ್ತಿಲ್ಲ. ಆದರೂ ಅರ್ಹ ಅಭ್ಯರ್ಥಿಗಳು ದೊರೆತಂತೆಲ್ಲಾ ಖಾಲಿ ಹುದ್ದೆಗಳನ್ನು ತುಂಬಲಾಗುತ್ತಿದೆ. ಮಂಜೂರಾತಿಯಾದ ೪೯ ಹುದ್ದೆಗಳಲ್ಲಿ ೩೪ ಹುದ್ದೆಗಳನ್ನು ತುಂಬಿದ್ದು ವಿದ್ಯಾರ್ಥಿಗಳ ವಿಷಯ ಜ್ಞಾನಕ್ಕೆ ಯಾವ ವಿಧದಲ್ಲಿಯೂ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ.

ಈ ಆಸ್ಪತ್ರೆಯಲ್ಲಿ ಸದ್ಯಕ್ಕೆ ಟಿ. ವಿ. ಸೆಟ್ಟಿನ ಜೊತೆಗೆ ಇಮೇಜ್ ಇಂಟೆನ್ಸಿಫೈಯರ್ ಅವಳವಡಿಸಿ ಮಾಡಿಕೊಂಡು ಆಸ್ಪತ್ರೆಯಲ್ಲಿ ಬುನಾದಿಗೊಳಿಸಿದೆ. ಅದನ್ನು ಸಧ್ಯದಲ್ಲಿಯೇ ಕಾರ್ಯರೂಪಕ್ಕೆ ತರಲಾಗುತ್ತಿದೆ. ೧೯೮೮-೮೯ನೇ ಆರ್ಥಿಕ ವರ್ಷದಲ್ಲಿ ಒಂದು ಅಲ್ಟ್ರಾ ಸೌಂಡ್ ಉಪಕರಣವನ್ನು ಖರೀದಿಸಿ ಕೊಡಲಾಗುತ್ತಿದೆ. ಹಾಗೂ ಇತರ ಅವಶ್ಯಕತೆ ಇರುವ ಉಪಕರಣಗಳನ್ನು ಹಂತಹಂತವಾಗಿ ಹಣಕಾಸಿನ ಅನುಕೂಲತೆಯ ಮೇರೆಗೆ ಒದಗಿಸಲಾಗುವುದು. ಆರೋಗ್ಯ ಇಲಾಖೆಯ ಆಸ್ಪತ್ರೆಗಳಲ್ಲಿ ಕೆಟ್ಟು ಹೋಗಿರುವ ಯಂತ್ರೋಪಕರಣಗಳ ದುರಸ್ತಿಗಾಗಿ ಕಿಯೋನಿಕ್ಸ್ ಸಂಸ್ಥೆಯೊಡನೆ ಇತ್ತೀಚೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಸಂಸ್ಥೆಯಿಂದ ಹುಬ್ಬಳ್ಳಿ ಆಸ್ಪತ್ರೆಯಲ್ಲಿ ಕೆಟ್ಟಿರುವ ಉಪಕರಣಗಳನ್ನು ದುರಸ್ತುಪಡಿಸಲು ಕ್ರಮ ಕೈಗೊಳ್ಳಲಾಗಿದೆ.

೨. ಉಡುಪಿಯ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಗೆ ಸುಸಜ್ಜಿತ ವ್ಯವಸ್ಥೆಯನ್ನು ಮಾಡುವುದು.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ ಕ್ರಮ-ನಿಯಮವಿಲ್ಲದೆ ಕರೆಂಟು ಕಡಿತ, ವೇಳೆ-ವ್ಯವಸ್ಥೆಗಳಿಲ್ಲದ ವಿದ್ಯುತ್ ಸ್ಥಗಿತ-ಇದರಿಂದಾಗಿ ಉಡುಪಿಯಲ್ಲಿ ಸಂತ್ರಸ್ತರಿಗೆ ಸಾಯರಿ ಬೇಕಾದ ಶೋಚನೀಯ ಸ್ಥಿತಿ. ಬಡ ಹಾಗೂ ವಂಧ್ಯಮ ವರ್ಗದ ಜನರ ಚಿಕಿತ್ಸೆಗೆ—ಉಡುಪಿ ಸರಕಾರಿ ಆಸ್ಪತ್ರೆಗೆ, ಹೆರಿಗೆಗೆ—ಉಡುಪಿ ಹೆಣ್ಣುಮಕ್ಕಳ ಆಸ್ಪತ್ರೆಯೇ ಗತಿ. ಹೆಚ್ಚು ಹಣ ತೆತ್ತು ಖಾಸಗಿ ಆಸ್ಪತ್ರೆಗಳಿಗೆ ಹೋಗಲು ಅವರಿಗೆ ಶಕ್ತಿ ಇಲ್ಲ ಆದರೆ ಈ ಸರಕಾರಿ ಆಸ್ಪತ್ರೆಗಳಲ್ಲಿ ಡೀಸಲ್ ಜನರೇಟರುಗಳು ಇಲ್ಲ. ಪರಿಣಾಮವಾಗಿ ತುರ್ತು ಶಸ್ತ್ರ ಚಿಕಿತ್ಸೆ ಅಥವಾ ಹೆರಿಗೆ ವೇಳೆಯಲ್ಲಿ ಕರೆಂಟು ಕೈ ಕೊಟ್ಟರೆ, ರೋಗಿಗಳ ಬಾಳಿಗೆ ಬೆಂಕಿ ಇಟ್ಟಂತೆ ಆಗುತ್ತದೆ. ಆದ್ದರಿಂದ ಆಸ್ಪತ್ರೆಗಳಿಗೆ ಬೇಕಾದಷ್ಟು ಶಕ್ತಿಯ ಡೀಸಲ್ ಜನರೇಟರಂಗಳನ್ನು ಕೂಡಲೇ ಒದಗಿಸಬೇಕು. ಆ ಆಸ್ಪತ್ರೆಗಳಲ್ಲಿರುವ ಓಬೀರಾಯನ ಕಾಲದ ವಂಚಿಗಳು, ಪೀಠೋಪಕರಣಗಳು ಮತ್ತು ಚಿಕಿತ್ಸಾ ಉಪಕರಣಗಳನ್ನು ಬದಲಿಸಿ, ಹೊಸತಾಗಿ ಪೂರೈಕೆ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ಈ ದೊಡ್ಡ ಆಸ್ಪತ್ರೆಗಳಲ್ಲಿ ವರ್ಷದಿಂದ ವರ್ಷಕ್ಕೆ ಏರುತ್ತಿರುವ ರೋಗಿಗಳ ಸಂಖ್ಯೆಗನುಸಾರವಾಗಿ ಔಷಧ ಪೂರೈಕೆಯನ್ನು ಹೆಚ್ಚಿಸಬೇಕು. ಈ ಆಸ್ಪತ್ರೆಗಳು ತಾಪತ್ರಯದ ಛತ್ರಗಳಾಗದೆ, ಬಡಪರ ಆಸರೆಗೆ ಕೃಪಾ ಪಾತ್ರವಾಗಬೇಕು ಎಂದು ಸರಕಾರವನ್ನು ಈ ಸದನದ ಮೂಲಕ (ಪುಣ್ಯಕ್ಕೆ ಕರೆಂಟು ಇರುವ ಹೊತ್ತಿನಲ್ಲಿ) ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಶ್ರೀಮತಿ ಶಕುಂತಲಾ ಬಿ. ಚೌಗುಲೆ (ಚಿಕ್ಕೋಡಿ).—ಮಾನ್ಯ ಸದಸ್ಯರು ಗೈರು ಹಾಜರಿ.

೩. ಗೋಕಾಕ್ ನಗರದಲ್ಲಿ ಕನ್ನಡ ಮತ್ತು ಉರ್ದು ಪಾಠ ಶಾಲೆಯ ಕಟ್ಟಡಕ್ಕೆ ಬಾಡಿಗೆಯನ್ನು ಕೊಡದೇ ಇರುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಅಧ್ಯಕ್ಷರೇ ಬೈಲಹೊಂಗಲ ಮತ್ತು ಗೋಕಾಕ್ ನಗರದಲ್ಲಿ ಕನ್ನಡ ಶಾಲೆಯ ಮತ್ತು ಉರ್ದು ಶಾಲೆಯ ಕಟ್ಟಡ ಬಾಡಿಗೆ ಕೊಡುವ ಕುರಿತು